International Journal of Kannada Research
www.kannadajournal.com

**ISSN: 2454–5813**
IJKR 2018; 4(2): 149-152
© 2018 IJKR
www.kannadajournal.com
Received: 15-02-2018
Accepted: 16-03-2018

**ಅಮೃತಾ ರಶ್ಮಿ ಫೆರ್ನಾಂಡಿಸ್**
ಸಂಶೋಧನಾ ವಿದ್ಯಾರ್ಥಿನಿ, ಡಾ. ಹಾಮಾನಾ ಸಂಶೋಧನಾ ಕೇಂದ್ರ, ಉಜಿರೆ

**ಕನ್ನಡ ಉಪನ್ಯಾಸಕರು**
ಸ.ಪ.ಪೂ.ಕಾಲೇಜು, ಉಪ್ಪಿನಂಗಡಿ, ಪುತ್ತೂರು ತಾಲೂಕು

**Correspondence**
**ಅಮೃತಾ ರಶ್ಮಿ ಫೆರ್ನಾಂಡಿಸ್**
ಸಂಶೋಧನಾ ವಿದ್ಯಾರ್ಥಿನಿ, ಡಾ. ಹಾಮಾನಾ ಸಂಶೋಧನಾ ಕೇಂದ್ರ, ಉಜಿರೆ

# ಕನ್ನಡ ಕಾದಂಬರಿಗಳಲ್ಲಿ ವಲಸೆ

**ಅಮೃತಾ ರಶ್ಮಿ ಫೆರ್ನಾಂಡಿಸ್**

ಆರ್ಥಿಕ, ಸಾಮಾಜಿಕ ಕಾರಣಗಳಿಂದಾಗಿ ಮಾನವ ಒಂದೆಡೆಯಿಂದ ಇನ್ನೊಂದೆಡೆ ಸ್ಥಳಾಂತರಗೊಳ್ಳುತ್ತಾನೆ. ಮಾನವ ವಲಸೆಯನ್ನು ಚರಿತ್ರೆಯ ಪುಟಗಳಿಂದ ತಿಳಿಯಬಹುದು. ಆದಿಕಾಲದಲ್ಲಿ ಅಲೆಮಾರಿಯಾಗಿದ್ದ ಮಾನವ ಬೆಳೆ ಬೆಳೆಯಲು ಕಲಿತ ಮೇಲೆ ಒಂದೆಡೆ ನೆಲೆನಿಂತ. ಹೀಗೆ ನೆಲೆ ನಿಂತ ಪ್ರದೇಶ ಭದ್ರತೆ, ಸಮಾಜದ ಒಡನಾಟ, ಅಸ್ಮಿತೆ ಎಲ್ಲವನ್ನೂ ನೀಡಿತು. ಕೃಷಿ ಹಾಗೂ ಪಶುಪಾಲನೆ ಆತನನ್ನು ಅದೇ ಪ್ರದೇಶದಲ್ಲಿ ಸ್ಥಿರವಾಗಿ ನಿಲ್ಲಿಸಿ ದೂರ ಚಲಿಸದಂತಹ ವಾತಾವರಣ ನಿರ್ಮಾಣವಾಯಿತು. ದುಡಿತಕ್ಕೆ ಒಗ್ಗಿಕೊಂಡು ಸ್ವಾವಲಂಬಿಯದ ಮಾನವನ ಬದುಕಿನಲ್ಲಿ ಬದಲಾವಣೆಯ ಗಾಳಿ ಬೀಸತೊಡಗಿದ್ದು ವಸಾಹತುಶಾಹಿ ಆಡಳಿತದಲ್ಲಿ.

ತುಳುನಾಡು ಟಿಪ್ಪುವಿನ ಮರಣಾನಂತರ ಮದರಾಸು ಪ್ರಾಂತ್ಯಕ್ಕೆ ಸೇರಿತ್ತು. ಆಧುನಿಕತೆಯ ಜ್ಞಾನಪರ್ವವು ಹಲವು ನೆಲೆಗಳಲ್ಲಿ ತುಳುನಾಡನ್ನು ಪ್ರವೇಶಿಸಿತು. ಇಂಗ್ಲೀಷ್ ವಿದ್ಯಾಭ್ಯಾಸ, ಯಂತ್ರ ನಾಗರಿಕತೆ, ರಾಷ್ಟ್ರೀಯತೆಯ ಪ್ರಜ್ಞೆಯಿಂದ ರೂಪುಗೊಂಡ ಸುಧಾರಣಾ ಚಳುವಳಿ ಹೊಸ ಬಗೆಯ ಚಿಂತನೆ ರೂಪಿಸಿತು. ಕೃಷಿ ಪ್ರಧಾನವಾಗಿದ್ದ ತುಳುನಾಡು ಶಿಕ್ಷಣದಿಂದ, ಹೊಸ ತಂತ್ರಜ್ಞಾನದ ಆಗಮನದಿಂದ ಉಂಟಾದ ಸ್ಥಿತ್ಯಂತರಗಳಿಂದ ವಲಸೆಯತ್ತ ಮುಖ ಮಾಡಲು ಜನರನ್ನು ಪ್ರೇರೇಪಿಸುತ್ತದೆ. ಹತ್ತೊಂಬತ್ತನೆಯ ಶತಮಾನದ ಆರಂಭದ ದಿನಗಳಲ್ಲಿ ನಿಧಾನವಾಗಿ ಆರಂಭವಾದ ವಲಸೆ ನಂತರ ದಿನಗಳಲ್ಲಿ ತೀವ್ರಸ್ವರೂಪವನ್ನು ತಾಳುತ್ತದೆ. ಹೋಟೆಲ್ ಉದ್ಯಮ, ಶಿಕ್ಷಣ, ಗಾಂಧಿಯ ಪ್ರಭಾವ ಮುಂತಾದ ಹಲವು ಕಾರಣಗಳಿಂದ ಜನ ಮುಂಬೈ, ಕೇರಳಕ್ಕೆ ವಲಸೆ ಹೋಗುವ ಚಿತ್ರಣ ಕಂಡುಬರುತ್ತದೆ. ಸದ್ಯದ ಬದುಕಿನ ಪರಿಸ್ಥಿತಿಯನ್ನು ಉತ್ತಮಪಡಿಸುವುದು ವಲಸೆಯ ಪ್ರಧಾನ ಉದ್ದೇಶ. ವಲಸೆಯಿಂದ ಆರ್ಥಿಕವಾಗಿ ಸಬಲರಾದ ಜನ ತುಳು ಸಂಸ್ಕೃತಿಯನ್ನು ಮತ್ತೆ ಬಲಪಡಿಸುವ ಕಾಯಕವನ್ನು ಕೈಗೊಳ್ಳುವುದನ್ನು ಕಾಣಬಹುದು. ದುಡ್ಡು ಗಳಿಸಿ ಮನೆಯ ನವೀಕರಣ, ಹಂಚು ಹೊದೆಸುವ ಪ್ರಕ್ರಿಯೆ ಗಮನಿಸಬಹುದು. ವಲಸೆಯು ನವಶ್ರೀಮಂತರನ್ನು ರೂಪಿಸುತ್ತದೆ. ಮಹಾನಗರಗಳಿಗೆ ವಲಸೆ ಹೋದವರು ಹೊಸ ಸನ್ನಿವೇಶಗಳಿಗೆ, ಪ್ರಭಾವಗಳಿಗೆ ತಮ್ಮನ್ನು ತೆರೆದುಕೊಳ್ಳುತ್ತಾರೆ. ಆಧುನಿಕ ಶಿಕ್ಷಣ, ಉದ್ಯೋಗಗಳಿಂದ ತುಳುನಾಡಿನಿಂದ ವಲಸೆ ಹೋಗುವ ಜನರ ಸಂಖ್ಯೆ ಸ್ವಾತಂತ್ರ್ಯಾ ನಂತರದ ದಿನಗಳಲ್ಲಿ ಹೆಚ್ಚುತ್ತಾ ಬಂದಿದೆ. ಭಾರತದ ಮಹಾನಗರಗಳಾದ ಮುಂಬೈ, ಕೇರಳಗಳಿಗೆ ಸೀಮಿತವಾದ ವಲಸೆ, ನಂತರದ ದಿನಗಳಲ್ಲಿ ವಿದೇಶಿ ನೆಲದವರೆಗೂ ಹರಡಿದೆ. ಕುಟುಂಬಗಳು ಜನರಹಿತ ಪರಿಸ್ಥಿತಿಗೆ ತಲುಪಿವೆ. ನೆಲದ ಒಡನಾಟದಿಂದ ಜನ ದೂರ ಸರಿದು, ಕೃಷಿ ಭೂಮಿ ಹಡೀಲು ಬಿಡಬೇಕಾದ ಸ್ಥಿತಿ ನಿರ್ಮಾಣಗೊಂಡು ನವತಲ್ಲಣಗಳು ಎಲ್ಲೆಡೆ ಉದಯಿಸಿವೆ.

‘ಮುಂಬಯಿ ಮಹಾನಗರವು ತುಳುನಾಡಿನ ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ನೆಲೆಗಳನ್ನು ಪಲ್ಲಟಗೊಳಿಸುವಂತೆ ಪಾತ್ರವಹಿಸುತ್ತದೆ. ತುಳುವರ ಮುಂಬಯಿ ವಲಸೆ ಎನ್ನುವುದು ಕೇವಲ ಉದ್ಯೋಗವನ್ನರಸಿ ಆ ಸೀಮಿತ ನೆಲೆಯಲ್ಲಷ್ಟೇ ಉಳಿಯುವುದಿಲ್ಲ. ಹಣ ಸಂಪಾದನೆ ಮತ್ತು ಸ್ವಾವಲಂಬನೆ ಹಲವು ರೀತಿಗಳಲ್ಲಿ ವಿಶಿಷ್ಟ ಮನೋಭಾವ ಮತ್ತು ವ್ಯಕ್ತಿತ್ವವನ್ನು ರೂಪಿಸುತ್ತದೆ. ತುಳುನಾಡಿನ ಆಧುನಿಕ ಇತಿಹಾಸದ ಸಮಗ್ರ ನೆಲೆಯನ್ನು ಪರಿಭಾವಿಸಬೇಕಾದರೆ ಉದ್ಯೋಗನಿಮಿತ್ತ ಮುಂಬಯಿ, ವಿದೇಶಗಳಿಗೆ ಒಟ್ಟಿನಲ್ಲಿ ಬೇರೆ ಬೇರೆ ಪರವೂರುಗಳಿಗೆ ಹೋಗಿ ಸಂಪಾದಿಸಿದ ಹಣವನ್ನು ತಂದು ತುಳುನಾಡಿನಲ್ಲಿ ವಿನಿಯೋಗಿಸಿದ ಚರಿತ್ರೆಯ ಮೂಲಕ ದರ್ಶಿಸಬೇಕಾಗುತ್ತದೆ.[1] ಎಂಬ ಮಾತು ಮುಂಬೈ ತುಳುನಾಡಿನ ವಲಸಿಗರಿಗೆ ನೀಡಿದ ಅವಕಾಶಗಳು ಹಾಗೂ ಅವರನ್ನು ದೃಢವಾಗಿ ಬೇರೂರಿ ಬೆಳೆಯಲು ಉದಾರಿಯಾದದ್ದನ್ನು ಮರೆಯುವಂತಿಲ್ಲ.

ವಲಸೆಗೆ ಹಲವು ಕಾರಣಗಳು ಇದ್ದರೂ ಶೈಕ್ಷಣಿಕ ಕಾರಣಗಳು, ಔದ್ಯೋಗಿಕ ಕಾರಣಗಳು, ಆದರ್ಶದ ಕಾರಣಗಳು ಎಂದು ಮೂರು ವಿಧವಾಗಿ ವಿಂಗಡಿಸಬಹುದು.

ಮರಳಿ ಮಣ್ಣಿಗೆಯ 'ರಾಮ', ಸಾಗರದೀಪ ಕಾದಂಬರಿಯ 'ಕುಮಾರ' ಇವರ ಶೈಕ್ಷಣಿಕ ವಲಸೆ ಹಲವು ಆಯಾಮಗಳನ್ನು ತೆರೆದಿಡುತ್ತದೆ. ರಾಮನಿಗೆ ಓದಿನ ಅವಕಾಶ, ದುಡಿಯುವ ಸಾಧ್ಯತೆಗಳನ್ನು ಒದಗಿಸುತ್ತಾ ಸ್ವಾತಂತ್ರ್ಯ ಚಳುವಳಿಯಲ್ಲಿ ಸೇವೆ ಸಲ್ಲಿಸಲು ಸ್ಫೂರ್ತಿ ನೀಡಿತು. ಉನ್ನತ ವಿದ್ಯಾಭ್ಯಾಸ ನಗರಕೇಂದ್ರಿತವಾಗಿತ್ತು. ವಿದ್ಯಾಭ್ಯಾಸದ ಜೊತೆಗೆ ರಾತ್ರಿಶಾಲೆಯ ಓದಿಗೂ ಅವಕಾಶವಿದ್ದ ಸಂಗತಿಯನ್ನು ಸಾಗರದೀಪ ಕಾದಂಬರಿ ಹಿಡಿದಿಡುತ್ತದೆ. ಅವಕಾಶಗಳ ಸರಮಾಲೆ ಇರುವ ನಗರಗಳೂ ಕಾಲದ ಪ್ರಭಾವದಿಂದ ತಪ್ಪಿಸಿಲ್ಲ.

ತುಳುನಾಡಿನಿಂದ ಔದ್ಯೋಗಿಕ ವಲಸೆಯು ಹಲವು ನೆಲೆಗಳಲ್ಲಿ ನಡೆಯುತ್ತದೆ. ಅಶಿಕ್ಷಿತ ಸಮುದಾಯದವರಿಂದ ಶಿಕ್ಷಿತ ಸಮುದಾಯದವರೆಗೆ, ಕೆಳವರ್ಗದವರಿಂದ ಮೇಲ್ವರ್ಗದವರೆಗೆ ಪ್ರತಿಯೊಬ್ಬರೂ ಉನ್ನತಿಗಾಗಿ ಶ್ರಮಿಸುವುದು ಗಮನಾರ್ಹ. ಸ್ವಾತಂತ್ರ್ಯಪೂರ್ವಕಾಲಘಟ್ಟದಲ್ಲಿ ನಿಧಾನವಾಗಿ ವಲಸೆಯು ಹತ್ತಿರದ ಸ್ಥಳಗಳಿಗೆ ಆರಂಭವಾದರೆ ನಂತರದ ದಿನಗಳಲ್ಲಿ ಮುಂಬೈ, ವಿದೇಶಗಳಿಗೂ ಹಬ್ಬುತ್ತದೆ. ಆಶಾವಾದವೇ ವಲಸೆಯ ಮುಖ್ಯ ಲಕ್ಷಣವಾದರೂ ವಿಭಿನ್ನ ಬಗೆಯ ಅನುಭವಗಳನ್ನು ಕಾದಂಬರಿಗಳು ದಾಖಲಿಸುತ್ತವೆ. ವಲಸೆಯ ಆರಂಭಘಟ್ಟದಲ್ಲಿ ತಳಸಮುದಾಯದವರು ತಮ್ಮ ಅಜ್ಞಾನ, ಅರಿವಿನ ಕೊರತೆಗಳಿಂದ ಉದ್ಧಾರವಾಗದೆ ಉಳಿಯುವ ದುಸ್ಥಿತಿ ಗೋಚರಿಸುತ್ತದೆ.

ಗಾಂಧಿವಾದದಿಂದ ಪ್ರಭಾವಿತರಾಗಿ ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮುಕಲು ಕೆಲವರು ಮನೆ ತೊರೆದು ಸಬರಮತಿ ಆಶ್ರಮದ ಹಾದಿ ಕಂಡುಕೊಳ್ಳುತ್ತಾರೆ. ಉಲ್ಲಂಘನೆಯ ಸಂಕಪ್ಪ, ಮುಖಾಂತರದ ಟೊಪ್ಪಿ ಶಂಭಣ್ಣ, ಉಗ್ರಾಣಿ ಚೆನ್ನಪ್ಪ, ಪಾಚಿ ಕಟ್ಟಿದ ಪಾಗಾರದ ಸದಾನಂದ. ಆದರೆ ಈ ರೀತಿಯ ವಲಸೆ ತಾತ್ಕಾಲಿಕವಾಗಿತ್ತು. ವೈಯಕ್ತಿಕ ಹಾಗೂ ಸಮಾಜ ಸುಧಾರಣೆಯ ಕಳಕಳಿ ಇಲ್ಲಿ ತೀವ್ರವಾಗಿರುವುದನ್ನು ಗಮನಿಸಬಹುದು.

**ವಲಸೆಯಿಂದ ಪಡೆದ ಅನುಭವದ ಆಧಾರದಿಂದ ಸ್ವಂತ ಹಾಗೂ ನಾಡಿನ ಮೇಲಾದ ಪ್ರಭಾವಗಳು**

1. **ಶೈಕ್ಷಣಿಕ ಪ್ರಗತಿ**

ಉನ್ನತ ಶಿಕ್ಷಣ ಹಾಗೂ ರಾತ್ರಿ ಶಾಲೆಗಳು ವ್ಯಕ್ತಿಗಳ ಚಿಂತನೆ ಹಾಗೂ ಮನೋಭಾವದಲ್ಲಿ ಉಂಟು ಮಾಡಿದ ಬದಲಾವಣೆಗಳು ಹಲವಾರು. 'ಮರಳಿ ಮಣ್ಣಿಗೆ'ಯ ರಾಮ ಮದ್ರಾಸಿನಲ್ಲಿ ವಿದ್ಯಾಭ್ಯಾಸ ಪಡೆದದ್ದು, ಸ್ವಾತಂತ್ರ್ಯ ಚಳುವಳಿಯಲ್ಲಿ ದುಡಿಯಲು ಶಿಕ್ಷಣದಿಂದ ಪಡೆದ ಓದು ಹಾಗೂ ಅಂದಿನ ಪರಿಸ್ಥಿತಿ ಕಾರಣವಾಯಿತು. 'ಸಾಗರದೀಪ'ದ ಕುಮಾರ ಉದ್ಯೋಗ ಮಾಡುತ್ತಾ ರಾತ್ರಿ ಶಾಲೆಗೆ ತೆರಳಿ ವಕೀಲನಾದದ್ದು. ಶಿಕ್ಷಣ ಬದುಕಿನ ಹೊಸ ದಾರಿಗಳನ್ನು ತೆರೆಯಿತು. ಪರಂಪರೆಯಿಂದ ಬಂದ ಅನ್ನದ ಮಾರ್ಗಗಳಿಗೆ ಭಿನ್ನವಾದ ಮಾರ್ಗಗಳನ್ನು ತೋರಿಸಿತು. ಕುಮಾರ ಮೊಗವೀರನಾದರೂ ಶಿಕ್ಷಣ ಆತನಿಗೆ ಉನ್ನತ ಸದವಕಾಶ ದಯಪಾಲಿಸಿತ್ತು. ಊರಿನಲ್ಲಿ ಸಹಕಾರ ಪದ್ಧತಿಯಿಂದ ಮೀನುಗಾರಿಕೆ ವೃತ್ತಿಯನ್ನು ಕಟ್ಟಿದ ಬಗೆ, ಆ ಸಂದರ್ಭಗಳಲ್ಲಿ ಉಂಟಾದ ಘರ್ಷಣೆ ಹಲವು ಸಮಸ್ಯೆಗಳಿಗೆ ಕಾರಣೀಭೂತವಾಗುತ್ತದೆ

ಡಾ.ಕೆ. ಶಿವರಾಮ ಕಾರಂತರು ಗುರುತಿಸುವಂತೆ:

'ಆಧುನಿಕ ವಿದ್ಯಾಭ್ಯಾಸದ ಅವಕಾಶಗಳು ನನ್ನ ಮೊದಲ ತಲೆಮಾರಿನ ಬದುಕಿಗೆ ಕೊಟ್ಟ ದಿಕ್ಕನ್ನೂ, ನನ್ನ ತಲೆಮಾರಿನವರಿಗೆ ಹೊಸತೆನಿಸಿದ್ದನ್ನೂ ತೋರಿಸಿದ್ದೆ. ಅದರ ದೆಸೆಯಿಂದ ನೆಲವನ್ನು ಬಿಟ್ಟು, ಪರವೂರಿನಲ್ಲಿ ಉದ್ಯೋಗಕ್ಕೆ ಹಂಬಲಿಸಬೇಕಾದ ಪರಿಸ್ಥಿತಿ ಬಂದಿತು. ಹಾಗೆ ಹೊರಟುಹೋದ ಮೂರನೇ ತಲೆಮಾರಿನ ವ್ಯಕ್ತಿ ರಾಮ ಐತಾಳರ ಮೊಮ್ಮಗ: ಅವನೂ ರಾಮನೇ'[2]. ವಲಸೆ ಪೀಳಿಗೆಯಿಂದ ಪೀಳಿಗೆಗೆ ಕೊಡುವ ಭಿನ್ನ ಅನುಭವಗಳು ಹಾಗೂ ಅವಕಾಶಗಳ ಬಗ್ಗೆ ವಿವೇಚಿಸುತ್ತಾರೆ.

**2. ಧಾರ್ಮಿಕತೆ**

ತುಳುನಾಡಿನಿಂದ ಪರವೂರಿಗೆ ತೆರಳಿದ ಹಲವರು ಸಾಮಾಜಿಕ ಹಾಗೂ ಧಾರ್ಮಿಕ ಕಾರ್ಯಗಳಿಗೆ ಹಣ ವ್ಯಯಿಸಿ ವೈಭವೀಕರಣಗೊಳಿಸಿ ಆಚರಣೆಗಳಿಗೆ ವಿಜೃಂಭಣೆ ತರುವ ಪ್ರಕ್ರಿಯೆ ಆರಂಭವಾಗುತ್ತದೆ. ಅಲ್ಲಿನ ಹಣ ಗಳಿಕೆಯು ಊರನ್ನು ಶ್ರೀಮಂತಗೊಳಿಸುತ್ತದೆ. 'ಉಲ್ಲಂಘನೆ' ಕಾದಂಬರಿಯಲ್ಲಿ ಸುಂದರ 'ನಾಗಮಂಡಲ' ನಡೆಸುವ ಚಿತ್ರಣವಿದೆ. ಭೂಮಸೂದೆ ಜಾರಿಯಿಂದ ತನ್ನ ಅಸ್ತಿತ್ವ ಕಳೆಗುಂದಿದ ಸ್ಥಿತಿಯಲ್ಲಿದ್ದ ಗುತ್ತು ನಾಗಮಂಡಲ ಸೇವೆ ಕೈಗೊಳ್ಳುವ ಮೂಲಕ ಮತ್ತೆ ಪ್ರಾಧಾನ್ಯತೆ ಪಡೆದುಕೊಳ್ಳುತ್ತದೆ. ನಾಗಮಂಡಲದಿಂದ ಗುತ್ತು ಮತ್ತೊಮ್ಮೆ ಎಲ್ಲರ ಕೇಂದ್ರವಾಗುತ್ತದೆ.

'ತೆಂಬರೆ' ಕಾದಂಬರಿಯಲ್ಲಿ ಚೆಲುವಯ್ಯ ಶೆಟ್ಟಿ ಬೊಂಬಾಯಿಯಲ್ಲಿ ಹೋಟೆಲ್ ಕೆಲಸಕ್ಕೆ ಹೋಗಿ ಸ್ವಂತ ಹೋಟೇಲು ಮಾಡಿ ಭೂಗತ ದೊರೆಯಾಗಿ ಬೆಳೆಯುತ್ತಾನೆ. ಚೆಲುವಯ್ಯ ಶೆಟ್ಟಿ ಊರಿಗೆ ಬಂದು ಎಪ್ಪತ್ತೈದು ಲಕ್ಷ ರೂಪಾಯಿ ಖರ್ಚಿನಲ್ಲಿ ಪಂಜುರ್ಲಿಗೆ ದೈವಸ್ಥಾನ ನಿರ್ಮಿಸುತ್ತಾನೆ. ದೈವಸ್ಥಾನಕ್ಕೆ ಹತ್ತು ಲಕ್ಷ ಖರ್ಚು ಮಾಡಿ ಬ್ರಹ್ಮಕಳಶ ಮಾಡುತ್ತಾನೆ. ಪಂಜುರ್ಲಿಗೆ ಏಳು ದಿನಗಳ ನೇಮವೂ ಆಗುತ್ತದೆ. ಕಾಳಹಣದಿಂದ ಸುಲಿಗೆಯ ಹಣದಿಂದ ವೈಭವದಿಂದ ಹಣ ಖರ್ಚುಮಾಡುತ್ತಾನೆ. ಆತನ ಕಪ್ಪು ಹಣವೆಲ್ಲವೂ ಬಿಳಿಯಾಗುತ್ತದೆ. ಈ ರೀತಿ ಧರ್ಮರಕ್ಷಕನಾಗಿ ಬೆಳೆದ ಚೆಲುವಯ್ಯಶೆಟ್ಟಿ ಬೂದಮೂಲ್ಯನ ಜಮೀನನ್ನು ಅಪಹರಿಸಲು ಪ್ರಯತ್ನಿಸುತ್ತಾನೆ. ಕ್ರೌರ್ಯದ ಎಳೆಯನ್ನು ಕೂಡ ಹಿಡಿದಿಡುವ ಪ್ರಯತ್ನವನ್ನು ಕಾದಂಬರಿ ಮಾಡಿದೆ.

3. **ಚಿಂತನೆಗಳ ಪಲ್ಲಟ**

ವಲಸೆಯಿಂದ ಪಡೆದ ನವ ಅನುಭವಗಳು ಹೊಸ ಚಿಂತನೆಗಳು ರೂಪುಗೊಂಡು ತಮ್ಮ ನಾಡಿನಲ್ಲಿ ಬದಲಾವಣೆಗಳನ್ನು ತರಲು ಪ್ರೇರಣೆಯಾದವು. ವೈಜ್ಞಾನಿಕ ಚಿಂತನೆಗಳಿಂದ ಉನ್ನತಿಗೇರಲು ಸಹಾಯಕವಾಯಿತು. ಮರಳಿ ಮಣ್ಣಿಗೆ ಕಾದಂಬರಿಯ ರಾಮ, ಉಲ್ಲಂಘನೆಯ ಸಂಕಪ್ಪ, ಮುಖಾಂತರದ ಶಂಕರ ಇವರೆಲ್ಲ ಸ್ವಾತಂತ್ರ್ಯ ಚಳುವಳಿಯಲ್ಲಿ ತಮ್ಮದೇ ಆದ ಪಾತ್ರ ನಿರ್ವಹಿಸಿದ್ದಾರೆ. 'ಪಾಚಿ ಕಟ್ಟಿದ ಪಾಗಾರ' ಕಾದಂಬರಿಯಲ್ಲಿ ವಲಸೆಯಿಂದ ಚಿಂತನೆಗಳಲ್ಲಿ ಆಗುವ ಬದಲಾವಣೆಗಳನ್ನು ಗುರುತಿಸಬಹುದು. ಕಮಲಿಯ ಭಾವ ಮುಂಬಯಿಯಲ್ಲಿ ನೆಲೆಕಂಡುಕೊಂಡಿದ್ದರು. ಅವರಲ್ಲಿ ತುಳುನಾಡಿನ ಜನಸಾಮಾನ್ಯರ ಚಿಂತನೆಗಳಿಗಿಂತಲೂ ಮೇಲ್ಮಟ್ಟದ ಉನ್ನತ ಚಿಂತನೆಗಳನ್ನು ಕಾಣಬಹುದು. ಕಮಲಿಗೆ ಗಂಡು ನೋಡುವಾಗಲೂ ಮುಂಬಯಿಯ ಉದ್ಯೋಗಿ ಸಂಬಂಧ ನೋಡಿದ್ದರು. ಕಲಿಕೆಗೆ ದೇಶ, ಕಾಲ, ಪ್ರಾಯದ ಹಂಗು ಇಲ್ಲ ಎಂಬ ಚಿಂತನೆ ಇತ್ತು. ಈ ವಿಚಾರಧಾರೆ ಕಮಲಿಯ ಮನದಲ್ಲೂ ನೆಲೆನಿಂತಿತ್ತು. ವಲಸೆಯಿಂದ ವ್ಯಕ್ತಿಯ ಚಿಂತನೆಗಳು ವಿಶಾಲವಾಗುವುವು. ಹಳ್ಳಿಯ ಜನರಿಗಿಂತ ಮುಂಚೂಣಿಗೆ ಹೋಗಿರುವುದು ಅರಿವಾಗುತ್ತದೆ. ಕಲಿಕೆಯನ್ನು ವಿವಾಹಪೂರ್ವದಲ್ಲಿ ಮಾತ್ರ ಕೈಗೊಳ್ಳುವ ಚಿಂತನೆಗಿಂತ ಭಿನ್ನವಾದ ಚಿಂತನೆ ವ್ಯಕ್ತವಾಗುತ್ತದೆ. ಹತ್ತನೇ ತರಗತಿಗೆ

ಹುಡುಗಿಯರ ವಿದ್ಯಾಭ್ಯಾಸ ಮೊಟಕುಗೊಳಿಸಿ ವಿವಾಹಬಂಧನಕ್ಕೆ ಒಳಪಡಿಸುವ ಮಂಗಳೂರಿನ ಹಳ್ಳಿಯ ಮನಃಸ್ಥಿತಿಗಿಂತ ಮುಂಬಯಿಯ ಬೆಳೆದಿತ್ತು ಎನ್ನಬಹುದು.

'ಏನಾಯ್ತು? ನಿಮ್ಮ ಬೊಂಬಾಯಿ ಭಾವ ಏನು ಹೇಳ್ತಿದ್ರು ಗೊತ್ತುಂಟ? ಕಲಿಯಲಿಕ್ಕೆ ಕಾಲ, ದೇಶ, ಪ್ರಾಯ ಯಾವುದೂ ಇಲ್ಲಂಬ್ರು. ಗೊತ್ತಿಲ್ದ. ಎರಡು ಮಕ್ಕಳಾದ ಮೇಲೆ ಐಐಟಿಗೆ ಹೋಯಿ ಹಾಸ್ಟೆಲಿನಲ್ಲಿದ್ದು, ಮುಂದಿನ ಕಲಿಕೆ ಮಾಡಿದ್ದು'[3] ತನ್ನ ಭಾವನಿಂದ ಹೊಸ ತಿಳುವಳಿಕೆ ಪಡೆದ ಕಮಲಿ ಗಂಡ ಸೀತಾರಾಮನಿಗೆ ಹವ್ಯಾಸ, ಕಲಿಕೆ ಮುಂದುವರಿಸಲು ಪ್ರೇರಣೆ ನೀಡುತ್ತಾಳೆ.

'ನಿನ್ನ ಮಗುವಿನ ಸ್ಥಿತಿ ಏನಾಗಬೇಕು? ಹಿಂದೆ ದಿನ ಹೋದಂತೆ ಮುಂದೆಯೂ ಹೋದೀತೆ? ಅವನಿಗೆ ಏನಾದರೂ ವಿದ್ಯೆ ಕಲಿಸಿ ದೊಡ್ಡವನನ್ನಾಗಿ ಮಾಡಬೇಡವೇ? ಊರ ಮಂದಿಯನ್ನು ನೋಡು. ಅಲ್ಲಿ ಇಲ್ಲಿ ಜನರನ್ನು ನೋಡು. ಯಾವಾವ ಚಾಕರಿ ಹುಡುಕಿಕೊಂಡು ಊರೂರು ಸುತ್ತುತ್ತಾರೆ. ನಾನು ಸಣ್ಣದಿರುವಾಗ, ಇಲ್ಲಿ ಹುಟ್ಟಿದವನಿಗೆ ಇಲ್ಲೇ ಮೋಕ್ಷವಿತ್ತು. ಈಗ – ಹಾಗಲ್ಲ ಉಣ್ಣುವುದಕ್ಕೆ ಉಡುವುದಕ್ಕೆ ಹೆಚ್ಚು ಬೇಕು, ಅನಿಸುತ್ತದೆ. ಇನ್ನು ಮುಂದೆ ಪಾಣಿಪಂಚೆ ಉಟ್ಟು ದಿನ ಹೋಗುವ ಹಾಗಿಲ್ಲ'[4] ಎಂದರು. ವಾಸುದೇವಯ್ಯ ನಾಗವೇಣಿಗೆ ಹೇಳುವ ಮಾತುಗಳು ವಲಸೆಯ ಅನಿವಾರ್ಯತೆ, ದುಡಿಯಲು ಇತರ ಮಾರ್ಗಗಳೂ ಇರುವುದನ್ನು ಧ್ವನಿಸುತ್ತವೆ. ಬದಲಾಗುತ್ತಿರುವ ಕಾಲಘಟ್ಟದ ಅರಿವು ಜನಸಾಮಾನ್ಯರಲ್ಲೂ ಇದೆ ಎಂಬುವುದನ್ನು ದೃಢೀಕರಿಸುತ್ತವೆ.

### 4. ಕೌಟುಂಬಿಕ ಆರ್ಥಿಕತೆಯ ಹೆಚ್ಚಳ

ಮರಳಿ ಮಣ್ಣಿಗೆಯಲ್ಲಿ ಶೀನಮಯ್ಯ ಮುಳಿ ಹುಲ್ಲಿನ ಮನೆಗಳೇ ಎಲ್ಲೆಡೆ ಇರುವಾಗ ಮಾಡಿಗೆ ಹಂಚು ಹೊದೆಸುವುದು, ಆಸ್ತಿ ಖರೀದಿ, ಸಾಲ ನೀಡುವಷ್ಟು ಬೆಳೆಯುವುದು, ಹಣದ ಮದದಿಂದ ಹೊಗಳಿಕೆಗೆ ಹಣ ನೀಡುವುದು. ಸಮಾಜದಲ್ಲಿ ದೊಡ್ಡ ವ್ಯಕ್ತಿಯಾಗಿ ಬೆಳೆಯುವುದು. ಉಲ್ಲಂಘನೆ ಕಾದಂಬರಿಯಲ್ಲಿ ಭೂಮಸೂದೆಯಿಂದ ಸ್ಥಾನಮಾನ ಕಳೆದುಕೊಂಡ ಗುತ್ತು ಸಹಜವಾಗಿ ಅಧಿಕಾರ ಕಳೆದುಕೊಳ್ಳುತ್ತದೆ. ಮುಂಬೈಗೆ ವಲಸಿಗನಾದ ಸುಂದರ ಹೊಟೆಲ್ ಉದ್ಯಮದಿಂದ ಕಳೆದುಕೊಂಡ ಗುತ್ತಿನ ಸ್ಥಾನಮಾನ, ಹಣಕಾಸಿನ ನಾಲ್ಕು ಪಟ್ಟು ಹೆಚ್ಚಿಸುವ ಭರವಸೆ ನೀಡುತ್ತಾನೆ. ಗುತ್ತು ಮನೆಯ ಸಾಂಪ್ರದಾಯಿಕತೆ ಮರೆಯುವಂತೆ ಆಧುನಿಕ ಸಾಧನಗಳಿಂದ ಮನೆ ತುಂಬುತ್ತದೆ.

### 5.ಆಧುನಿಕತೆಯ ಪ್ರವೇಶ

ಆಧುನಿಕತೆಯು ತುಳುನಾಡನ್ನು ಶಿಕ್ಷಣ ಹಾಗೂ ವಲಸೆಯಿಂದ ಪಡೆದ ಅನುಭವಗಳಿಂದ ಪ್ರವೇಶಿಸಿತು. **ಉಲ್ಲಂಘ**ನೆಯಲ್ಲಿ ಗುತ್ತು ಮನೆಗೆ ಸೋಫಾ ಸೆಟ್ಟು ಬರುವುದು, ಮನೆಯ ಒಳಗಿನ ಶೌಚಾಲಯ, ಮಡಿವಂತಿಕೆ ಮರೆಯಾಗುವುದು. ಕೃಷಿಗೆ ಟಿಲ್ಲರ್ ಬಳಕೆ. ಆಧುನಿಕತೆಯಿಂದ ಮಡಿಮೈಲಿಗೆ ಕಡಿಮೆಯಾಗುವುದು.

### ವಲಸೆಯಿಂದ ಸ್ಥಿತ್ಯಂತರವಾದ ತುಳುನಾಡಿನ ಸಂಸ್ಕೃತಿ

ಆರ್ಥಿಕವಾಗಿ ಸಬಲತೆ, ಗಳಿಸಿದ ಹಣದಿಂದ ಊರಿನಲ್ಲಿ ಆಸ್ತಿ ಖರೀದಿ, ಹೆಚ್ಚಿದ ಸ್ಥಾನಮಾನ, ನಾಗಮಂಡಲ ಮೊದಲಾದ ಆಚರಣೆಗಳನ್ನು ವಿಜೃಂಭಣೆಯಿಂದ ಆಚರಿಸುವುದು, ಸಾಲದಿಂದ ಮುಕ್ತಿ ಮೊದಲಾದುವುಗಳಿಂದ ಆರ್ಥಿಕ ಭದ್ರತೆ ಕಾಣಬಹುದು. ಶಿಕ್ಷಣದಿಂದ ವಲಸೆಯ ಹೆಚ್ಚಳವಾಗುವುದನ್ನು ಗುರುತಿಸಬಹುದು. ಜಾತಿಪ್ರಜ್ಞೆಯಿಂದ ಉಂಟಾದ ಅಸ್ಪೃಶ್ಯತೆ ನಿಧಾನವಾಗಿ ಮರೆಯಾಗುವುದನ್ನು ಕಾಣಬಹುದು. ಸಾಂಪ್ರದಾಯಿಕ ಕಟ್ಟುಕಟ್ಟಳೆಗಳು ಮಾಯವಾಗಿ ಹೊಸ ಚಿಂತನೆಗಳು ರೂಪುಗೊಂಡವು.

ವಲಸೆ ಜನರಲ್ಲಿ ಆಧುನಿಕತೆಗೆ ಮುಖಾಮುಖಿಯಾಗಲು ಪ್ರೇರೇಪಿಸುತ್ತದೆ. ವಲಸಿಗರ ಅನುಭವದಿಂದ ತುಳುನಾಡು ಸಮೃದ್ಧವಾಯಿತು ಮಾತ್ರವಲ್ಲದೆ ಹೊಸ ಚಿಂತನೆಗಳು ರೂಪುಗೊಂಡವು.

'ಮೊಗಸಾಲೆಯವರ 'ಉಲ್ಲಂಘನೆ' ಕಾದಂಬರಿಯಲ್ಲೂ, ಮುಖಾಂತರ ಕಾದಂಬರಿಯಲ್ಲೂ ಒಂದು ಸಮಾನ ಅಂಶವಿದೆ. ಅದೇನೆಂದರೆ ವ್ಯವಹಾರ ಅಥವಾ ಉದ್ಯೋಗ ನಿಮಿತ್ತ ಬೃಹತ್ ನಗರಗಳಿಗೆ ವಲಸೆ ಹೋಗುವ ಹೊಸತಲೆಮಾರಿನ ಪ್ರತಿನಿಧಿಗಳು ತಮ್ಮ ಹುಟ್ಟೂರಿನ ನೆಲವನ್ನು ವಾಣಿಜ್ಯ ಸರಕು ಎಂಬ ದೃಷ್ಟಿಯಿಂದ ನೋಡುತ್ತಾರೆ. ಆದರೆ ಇಲ್ಲಿ ಉಳಿದಿರುವ ಹಳೆಯ ತಲೆಮಾರಿನ ಕೊನೆಯ ಕೊಂಡಿಗಳಿಗೆ ಇಲ್ಲಿನ ನೆಲ ಇಲ್ಲಿನ ಸಮೃದ್ಧ ಸಂಸ್ಕೃತಿಯನ್ನು ಧಾರಣೆ ಮಾಡುವ ಧಾರಿಣಿ. ಅವರು ಹೊಸ ತಲೆಮಾರಿನ ಪರವೂರಿಗೆ ಹೋಗುವ ಯುವಕರನ್ನು ಸಂಶಯ ಮತ್ತು ಆತಂಕದಿಂದ ನೋಡುತ್ತಾರೆ. ಈ ಬಗೆಯ ಕೊನೆ ಮೊಗಸಾಲೆಯವರ ಎರಡೂ ಕಾದಂಬರಿಗಳಲ್ಲಿವೆ'.[5]ಎಂಬ ಮಾತು ಒಪ್ಪತಕ್ಕದ್ದು.

### ವಲಸಿಗರ ಸೋಲಿಗೆ ಕಾರಣಗಳು

ತುಳುನಾಡಿನಿಂದ ವಲಸೆಗೆ ತೆರಳಿದವರಲ್ಲಿ ಪ್ರತಿಯೊಬ್ಬರೂ ಯಶಸ್ಸನ್ನು ಗಳಿಸದಿರುವುದನ್ನು ಗುರುತಿಸಬಹುದು. ಕೆಲವರು ಯಶಸ್ಸು ಕಂಡುಕೊಂಡರೆ, ಹಲವರ ಆಸೆ ಆಸೆಯಾಗಿಯೇ ಉಳಿಯುತ್ತದೆ. ಇದರ ಕಾರಣಗಳನ್ನು ಕಂಡುಕೊಳ್ಳಲು ಪ್ರಯತ್ನಿಸಿದಲ್ಲಿ ಭಿನ್ನ ಉತ್ತರಗಳು ಲಭ್ಯವಾಗುತ್ತದೆ. ಚೋಮನ ದುಡಿ ಕಾದಂಬರಿಯಲ್ಲಿ ಚೋಮ, ಚೋಮನ ಮಕ್ಕಳು, ಇತರೆ ವಲಸಿಗರು ಸೋಲಲು ಹಲವು ಕಾರಣಗಳಿವೆ. ಅಸ್ಪೃಶ್ಯತೆ, ತಮ್ಮ ಹಕ್ಕಿನ ಮಂಡನೆಯ ಕೊರತೆ, ತಮ್ಮ ಶ್ರಮಕ್ಕೆ ತಕ್ಕ ಪ್ರತಿಫಲದ ಬೇಡಿಕೆ ಸಲ್ಲಿಸಲು ಅಗತ್ಯವಿರುವ ಸೂಕ್ತ ಸಂಘಟನೆಯಾಗಲೀ, ತಿಳುವಳಿಕೆಯಾಗಲೀ ಇಲ್ಲದಿರುವುದು. ಇದಕ್ಕೆ ಬಾಲ್ಯದಿಂದ ಅವರು ಬೆಳೆದು ಬಂದ ಗುಲಾಮತನದ ಜೀವನ ಕಾರಣ ಎಂದು ಪ್ರಮುಖವಾಗಿ ಗುರುತಿಸಬಹುದು. ಜಮೀನ್ದಾರಿ ಪದ್ಧತಿಯಲ್ಲಿ ಮೂಲದಾಳಾಗಿ ದುಡಿದರೆ ಚೋಮನಿಗೆ ಸಿಗುವುದು ಎರಡು ಪಾವು ಅಕ್ಕಿ. ಕಠಿಣ ಶ್ರಮಕ್ಕೆ ಹೆಚ್ಚಿನ ಬೇಡಿಕೆ ಸಲ್ಲಿಸುವ ಪ್ರಜ್ಞೆ ಬೆಳೆದು ಬಂದಿಲ್ಲ. ಧನಿ ನೀಡಿದ್ದನ್ನೇ ಸ್ವೀಕರಿಸುವ ಪ್ರವೃತ್ತಿ ಹೊರತುಪಡಿಸಿ, ಶ್ರಮದ ಬೆಲೆ ಅರಿವಿಲ್ಲ. ಇಲ್ಲಿ ಘಟ್ಟಕ್ಕೆ ಹೋದ ವಲಸಿಗರು ತಿಂಗಳಿಗೆ ಏಳು ರೂಪಾಯಿಯಂತೆ ದುಡಿಯಲು ಒಪ್ಪಿಕೊಳ್ಳುತ್ತಾರೆ. ಇಲ್ಲಿ ಕಾಫಿತೋಟದ ಧನಿಗಳು ಸೂಕ್ತ ಸೌಲಭ್ಯ ಒದಗಿಸದೆ ದುಡಿಸುವುದು ಒಂದು ರೀತಿಯ ಶೋಷಣೆ, ಬಾಲ್ಯದಿಂದಲೇ ಶೋಷಣೆ ಅನುಭವಿಸಿದವರಿಗೆ ಅಥವಾ ಅದೇ ರೀತಿಯ ಬದುಕು ಅಭ್ಯಾಸವಾದವರಿಗೆ ವಿರೋಧಿಸುವ ಅಭ್ಯಾಸವೂ ಇಲ್ಲ. ದೈಹಿಕ ಶ್ರಮದ ಬದುಕು ಬದುಕುವವರಿಗೆ ಅಗತ್ಯವಿರುವ ಉತ್ತಮ ಆಹಾರ ಹಾಗೂ ಅಲ್ಲಿನ ಪ್ರತಿಕೂಲ ವಾತಾವರಣ ಅಂದರೆ ಚಳಿಯನ್ನು ಎದುರಿಸಲು ಅಗತ್ಯವಿರುವ ಸೌಲಭ್ಯಗಳು, ಔಷಧಿ ಲಭ್ಯವಿಲ್ಲ. ಬಡವರಾಗಿ ಬಂದವರು ಬಡವರಾಗಿಯೇ ಹಿಂದಿರುಗುವವರು ; ಇನ್ನೂ ಸ್ಪಷ್ಟವಾಗಿ ತಿಳಿಸಬೇಕೆಂದರೆ ಸಾಲಗಾರರಾಗಿ ಬಂದವರು ಸಾಲಗಾರರಾಗಿಯೇ ಹಿಂದಿರುಗುವುದು ಮತ್ತು ಆ ತೀರದ ಸಾಲದಿಂದಾಗಿ ಮತ್ತೆ ಘಟ್ಟಕ್ಕೆ ಹೋಗಲೇಬೇಕಾದ ಅನಿವಾರ್ಯತೆ ಸೃಷ್ಟಿಯಾಗುವುದು. ಈ ರೀತಿ ದಾಸ್ಯಕ್ಕೆ ಬಲಿಯಾಗುವುದು. ಈ ದೌರ್ಬಲ್ಯವನ್ನೇ ಬಳಸಿ ಕಾಫಿ ತೋಟದ ಮಾಲೀಕರು

ಶ್ರೀಮಂತರಾಗುವುದು. ಶ್ರೀಮಂತರ ಕುಟಿಲತನದಲ್ಲಿ ಈ ಬಡ ಜನ ಬಲಿಯಾಗುವುದು. ಅದರಿಂದ ಹೊರಬರಲು ಕುಡಿತದ ಚಟ ಅವರನ್ನು ಎಂದೂ ಬಿಡದೆ ಹಿಡಿದಿರುವುದು ಒಂದೂ ಕಾರಣ.

ಮರಳಿ ಮಣ್ಣಿಗೆಯ ಲಚ್ಚ ಬಾಲ್ಯದಿಂದ ತಂದೆತಾಯಿಯಿಂದ ದೂರವೇ ಇದ್ದ ಕಾರಣ ಆತನ ಮೇಲೆ ಹಿಡಿತ ಇರಲಿಲ್ಲ. ಆದ್ದರಿಂದ ಹಿರಿಯರ ಸೂಕ್ತ ನಿಯಂತ್ರಣ ತಪ್ಪಿದ್ದರಿಂದ ಬಾಲ್ಯದಿಂದಲೇ ಅಡ್ಡ ಹಾದಿ ಹಿಡಿದ ಆತ ಕೊನೆಯವರೆಗೂ ಸರಿಯಾಗುವುದೇ ಇಲ್ಲ.

## ವಲಸೆಯ ಪರಿಣಾಮಗಳು

- ವಲಸೆಯಿಂದ ವಿದ್ಯಾವಂತ ಯುವಜನತೆ ತುಳುನಾಡಿನಿಂದ ಹೊರಗೆ ಉತ್ತಮ ಉದ್ಯೋಗ ಅರಸಿ ಚಲಿಸುವುದು. ಇದರಿಂದ ಮನೆಯಲ್ಲಿ ವಯಸ್ಸಾದವರು ಮಾತ್ರ ಉಳಿಯುವುದು. ಕೃಷಿ ಭೂಮಿ ಉಳಲು ಅಸಾಧ್ಯವಾಗಿ ಬಿಡಬೇಕಾಗಿ ಬರುವುದು. ವಾಣಿಜ್ಯ ಬೆಳೆ ಬೆಳೆಯುವುದು ಅಥವಾ ಕೃಷಿಭೂಮಿಯ ಮಾರಾಟ.
- ಮುಂಬೈನಂತಹ ಪರವೂರುಗಳಿಗೆ ತೆರಳಿ ರಾತ್ರಿ ಶಾಲೆಯಲ್ಲಿ ವಿದ್ಯಾಭ್ಯಾಸ ಪಡೆದು ಉತ್ತಮ ಉದ್ಯೋಗ ಸಂಪಾದಿಸುವುದು ಜೊತೆಗೆ ಸಂಘಟನೆಗಳಲ್ಲಿ ದುಡಿದು ಊರಿನಲ್ಲಿ ಅದರ ಪ್ರಯೋಗಗಳನ್ನು ಮಾಡುವ ಸಾಮರ್ಥ್ಯ ಗಳಿಸುವುದು.
- ಆಧುನಿಕತೆ ತುಳುನಾಡನ್ನು ಯಂತ್ರಗಳು, ಚಿಂತನೆಗಳ ಮೂಲಕ ಪ್ರವೇಶಿಸಿತು. ಟಿಲ್ಲರ್, ರೈಲು, ಬಸ್ಸು, ಹೋಟೆಲ್, ಆಸ್ಪತ್ರೆಗಳು ಹಲವು ಬದಲಾವಣೆಗಳಿಗೆ ಕಾರಣವಾದವು. ಆಧುನಿಕತೆಯಿಂದ ಸಮಾನತೆ ಬಂತು.
- ಸಂಪತ್ತು ಹೆಚ್ಚುವುದರ ಜೊತೆಗೆ ತುಳುನಾಡಿನ ಧಾರ್ಮಿಕ ಕಾರ್ಯಗಳಲ್ಲಿ ವಿಜೃಂಭಣೆ, ವೈಭವ ಬೆಳೆಯಿತು. ಆಧುನಿಕತೆಯ ಮಾಂತ್ರಿಕ ಸ್ಪರ್ಶದಿಂದಾಗಿ ಧಾರ್ಮಿಕ ಕಾರ್ಯಗಳಲ್ಲಿ ಹೊಸತನ ಬರುವುದು ಜೊತೆಗೆ ಬದಲಾವಣೆ ಹಣವಂತ ಮೇಲ್ವರ್ಗದವರಿಂದ ಆದ ಕಾರಣ ವ್ಯತಿರಿಕ್ತ ವಿರೋಧವಿಲ್ಲದೆ ಹೋಗುವುದು ಗಮನಿಸಬೇಕಾದ ಅಂಶಗಳು.
- ತಮ್ಮ ಪಾರಂಪರಿಕ ವೃತ್ತಿಗಿಂತ ಭಿನ್ನವಾದ ವೃತ್ತಿ ಹೊಂದಲು ಉತ್ತಮ ಅವಕಾಶ ನೀಡಿತು. ಪರಂಪರಾಗತ ಉದ್ದಿಮೆಗಳನ್ನು ತೊರೆದು ಹೊಸ ಬಗೆಯ ವೃತ್ತಿಗಳಲ್ಲಿ ತೊಡಗಿಕೊಳ್ಳಲು ಸೂಕ್ತ ಅವಕಾಶ ಲಭ್ಯವಾಯಿತು. ಗೌರವ, ಸ್ಥಾನಮಾನ ಮರ್ಯಾದೆ ಹೆಚ್ಚಿತು. ಸಾಹಸ ಇನ್ನುಳಿದವರನ್ನೂ ಪ್ರೇರೇಪಿಸಿತು.
- ತುಳುನಾಡಿನಲ್ಲಿ ದೈವ ದೇವರುಗಳನ್ನು ಇನ್ನೊಬ್ಬರಿಗೆ ಹಸ್ತಾಂತರಿಸುತ್ತಿರಲಿಲ್ಲ. ವಂಶಪಾರಂಪರ್ಯವಾಗಿ ಪೂಜಿಸಲಾಗುತ್ತಿತ್ತು. ಆಧುನಿಕ ವಿದ್ಯಾಭಾಸ ನೀಡಿದ ಅವಕಾಶಗಳು ಕುಟುಂಬ ಸಮೇತ ವಲಸಿಗರಾಗಲು ಸಂದರ್ಭ ಸೃಷ್ಟಿಸಿದವು. ದೈವ, ದೇವರುಗಳನ್ನು ತ್ಯಜಿಸಲಾರದೆ ಹಳೆಯ ತಲೆಮಾರಿನವರು ತಲೆಕೆಡಿಸಿಕೊಂಡರೆ ಹೊಸ ತಲೆಮಾರು ತನ್ನ ವೈಯಕ್ತಿಕ ಆಕಾಂಕ್ಷೆಗಳನ್ನು ಮಾತ್ರ ಗಮನಿಸಿತು.

## ಉಪಸಂಹಾರ

ಸ್ವಾತಂತ್ರ್ಯಪೂರ್ವಕಾಲದಲ್ಲಿ ನಿಧಾನವಾಗಿ ಜನರು ತುಳುನಾಡಿನಿಂದ ವಲಸೆ ಹೋಗಲು ಆರಂಭಿಸಿದರು. ಚೋಮನ ದುಡಿ ಕಾದಂಬರಿಯ ಕಾಲದಲ್ಲಿ ನಡೆದೇ ಕ್ರಮಿಸುತ್ತಿದ್ದ ಹಾದಿ ನಂತರ ಸಾರಿಗೆ ಸಾಧನಗಳನ್ನು ಅವಲಂಬಿಸಿತ್ತು. ರೈಲು, ಬಸ್ಸು, ಹಡಗು, ವಿಮಾನಗಳ ಮೂಲಕ ಕಾಲಾಂತರದಲ್ಲಿ ಪ್ರಯಾಣ ಸುಖಕರವಾಗುತ್ತಾ ಬಂತು. ಆರ್ಥಿಕ ಸುಭದ್ರತೆಗಾಗಿ ಕೈಗೊಂಡ ವಲಸೆ ಇತರರಿಗೂ ಸ್ಫೂರ್ತಿಯಾಗಿ ಹಳ್ಳಿಯಿಂದ ಪೇಟೆಗೆ ಹೆಚ್ಚು ಜನರು ವಲಸೆ ಹೋಗಲು ಆರಂಭಿಸಿದರು. ವಲಸೆಯಿಂದ ವಿಭಿನ್ನ ಪರಿಣಾಮಗಳು ಉಂಟಾಗುತ್ತವೆ. ವಲಸೆ ಆಶಾದಾಯಕ, ಬದುಕಿಗೆ ಉತ್ಸಾಹ ನೀಡುವಂತೆ ಬಾಹ್ಯನೋಟಕ್ಕೆ ಗೋಚರಿಸಿದರೂ, ಸ್ವನಿಯಂತ್ರಣ ಇಲ್ಲದಿದ್ದಲ್ಲಿ ಆರ್ಥಿಕ ಸಬಲತೆ ಪಡೆಯುವುದು ಅಸಾಧ್ಯ ಎಂಬ ಕಟುಸತ್ಯವನ್ನು ಕಾದಂಬರಿಗಳು ಧ್ವನಿಸುತ್ತವೆ. ಹವಾಮಾನ ವೈಪರೀತ್ಯ, ಮದ್ಯಪಾನ, ಸ್ತ್ರೀ ವ್ಯಾಮೋಹ, ಒಂಟಿತನ, ಅತಿಯಾದ ದುಡಿತ, ಮನರಂಜನೆಯ ಕೊರತೆ ವಲಸೆಯ ನಿರೀಕ್ಷಿತ ಫಲ ಅನುಭವಿಸುವಲ್ಲಿ ಹಿನ್ನಡೆಗೆ ಕಾರಣವಾಗುತ್ತವೆ. ಕೆಲವೊಮ್ಮೆ ಸಾಮಾಜಿಕ ವಿಪ್ಲವಗಳಿಂದಾಗಿ ಬಯಸಿದ ಲಾಭ ದೊರೆಯದು. ಸ್ವನಿಯಂತ್ರಣ, ಗುರಿಯತ್ತ ಕೇಂದ್ರೀಕೃತ ನೋಟ, ಬದಲಾದ ಪರಿಸ್ಥಿತಿಗಳಿಗೆ ಹೊಂದಿಕೊಳ್ಳುವ ಛಲ ವಲಸೆಯ ಪೂರ್ಣಪ್ರಮಾಣದ ಫಲ ಪಡೆಯುವಲ್ಲಿ ಸಮರ್ಥವಾಗುತ್ತವೆ. ವಲಸೆಯಿಂದ ಶ್ರೀಮಂತರಾದವರು ದೈವ, ದೇವತಾ ಕಾರ್ಯಗಳ ಮೂಲಕ ಜನರ ವಿಶ್ವಾಸಗಳಿಸುವಲ್ಲಿ ಯಶಸ್ವಿಯಾಗುವುದು ಹಾಗೂ ಕೆಲವೊಮ್ಮೆ ಕ್ರೌರ್ಯದ ಮೂಲಕ ಜನರ ಸಂಪತ್ತನ್ನು ಲೂಟಿಮಾಡುವುದು ಹೀಗೆ ವಿಭಿನ್ನ ಪರಿಣಾಮಗಳನ್ನು ಗುರುತಿಸಲು ಸಾಧ್ಯವಿದೆ. ಆರಂಭಶೂರತನ ಮುಂದಿನ ಕಠಿಣ ಪರಿಸ್ಥಿತಿಗಳನ್ನು ಎದುರಿಸಬೇಕಾದ ಸಂದರ್ಭ ಬಂದಾಗ ಮರೀಚಿಕೆಯಾಗುವುದು ದುರಂತವೇ ಸರಿ. ವಲಸೆ ಹೋದವರು ತಮ್ಮ ಕುಟುಂಬದ ಪ್ರೀತಿ ಮರೆಯುವುದನ್ನು ಉಲ್ಲಂಘನೆಯ ರಂಜಿತ್ ಹಾಗೂ ಮುಖಾಂತರದ ನಾರಾಯಣನಲ್ಲಿ ಕಾಣಬಹುದು. ಇಬ್ಬರೂ ತುಂಬಾ ಓದಿದವರು. ತಮ್ಮ ಇಚ್ಛೆಗೆ ಅನುಗುಣವಾಗಿ ವಿವಾಹವಾದವರು. ವೈಯಕ್ತಿಕ ಚಿಂತನೆ ಹಾಗೂ ಹಣ ದೋಚುವ ದೃಷ್ಟಿಕೋನ ಗುರುತಿಸಬಹುದು.

## ಗ್ರಂಥ ಋಣ


1. ತುಳು ಸಾಹಿತ್ಯ ಚರಿತ್ರೆ, ಡಾ. ಬಿ.ಎ. ವಿವೇಕ ರೈ, ಹಂಪಿ ಕವಿವಿ, 2007, ಪುಟ 877.
2. ಸ್ಮೃತಿಪಟಲದಿಂದ ಸಂಪುಟ 2, ಡಾ.ಶಿವರಾಮ ಕಾರಂತ, ಐಬಿಎಚ್ ಪ್ರಕಾಶನ, ಬೆಂಗಳೂರು, ಪ್ರಥಮ ಮುದ್ರಣ 1978, ನಾಲ್ಕನೇ ಮುದ್ರಣ 2011, ಪುಟ 48.
3. ಪಾಚಿಕಟ್ಟಿದ ಪಾಗಾರ, ಮಿತ್ರಾ ವೆಂಕಟ್ರಾಜ, ಮನೋಹರ ಗ್ರಂಥಮಾಲಾ ಧಾರವಾಡ, 2004, ಪುಟ 337
4. ಮರಳಿ ಮಣ್ಣಿಗೆ, ಡಾ. ಕೆ. ಶಿವರಾಮಕಾರಂತ, ಎಸ್‌ಬಿಎಸ್ ಪಬ್ಲಿಷರ್ಸ್ ಡಿಸ್ಟ್ರಿಬ್ಯೂಟರ್ಸ್, ಮರುಮುದ್ರಣ 2015, ಪುಟ 337.
5. ಸೀತಾಪುರದ ಮುಖಾಂತರ ಭಾರತ, ಬಿ. ಜನಾರ್ಧನ ಭಟ್, ಚಿಂತನ ಬಯಲು, ಸಂಪುಟ 3 ಸಂಚಿಕೆ 3 ಮಾರ್ಚ್ 2015, ಪುಟ 10.
6. ತುಳುವರ ಮುಂಬಯಿ ವಲಸೆ, ಡಾ. ವಿಶ್ವನಾಥ ಕಾರ್ನಾಡ್, ಕನ್ನಡ ವಿಭಾಗ ಮುಂಬಯಿ ವಿಶ್ವವಿದ್ಯಾಲಯ, 1994
7. ಪೊಲಿ, ಮುಕುಂದ ಪ್ರಭು, ಕೆನರಾ200, 2000
8. ಸ್ಮೃತಿಪಟಲದಿಂದ ಸಂಪುಟ 2, ಡಾ.ಶಿವರಾಮ ಕಾರಂತ, ಐಬಿಎಚ್ ಪ್ರಕಾಶನ, ಬೆಂಗಳೂರು, ಪ್ರಥಮ ಮುದ್ರಣ 1978, ನಾಲ್ಕನೇ ಮುದ್ರಣ 2011.
9. ತುಳು ಸಾಹಿತ್ಯ ಚರಿತ್ರೆ, ಡಾ. ಬಿ.ಎ. ವಿವೇಕ ರೈ, ಹಂಪಿ ಕವಿವಿ, 2007.